**<u>ಪ್ರಧಾನ ಸಿವಿಲ್ ಮತ್ತು  ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಚಿಂಚೋಳಿ</u>**

**ಸಿ.ಸಿ. ನಂ.  451/2022**

| | | | |
|---|---|---|---|
| **ಹೆಸರು** | **:** | **ವೀರಾರೆಡ್ಡಿ** | |
| **ತಂದೆಯ ಹೆಸರು** | **:** | **ರಾಮರೆಡ್ಡಿ** | **DW- 1** |
| **ವಯಸ್ಸು** | **:** | **54 ವರ್ಷ** | **ದಿನಾಂಕ: 16-09-2025** |
| **ಉದ್ಯೋಗ** | **:** | **ವ್ಯಾಪಾರ** | |
| **ವಾಸಸ್ಥಳ** | **:** | **ಐನಾಪುರ** | |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**<u>ಮುಖ್ಯ ವಿಚಾರಣೆ ಆರೋಪಿತರ ಪರವಾಗಿ ಶ್ರೀ NHR ವಕೀಲರಿಂದ:</u>**

ದಿನಾಂಕ 01-10-2021ರಂದು ನನ್ನ ಜಮೀನು ಮತ್ತು ಪಕ್ಕದ ಮಾಣಿಕ ರೆಡ್ಡಿರವರ ಜಮೀನಿನ ಮಧ್ಯ ಬದುವು ಇದ್ದು ಅದರ ಬಗ್ಗೆ ನಾನು ಕೇಳಿದಾಗ ಮಾಣಿಕ ರೆಡ್ಡಿರವರು ನನಗೆ ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ. ದಿನಾಂಕ 02-10-2021ರಂದು ಮಾಣಿಕ ರೆಡ್ಡಿರವರ ಮಕ್ಕಳು ಬಂದು ನನ್ನ ಮಗನಾದ 2ನೇ ಆರೋಪಿಗೆ ಹಲ್ಲೆ ಮಾಡಿರುತ್ತಾರೆ. ಅಲ್ಲಿನ ಜನರು ಜಗಳವನ್ನು ಬಿಡಿಸಿರುತ್ತಾರೆ ಮತ್ತು ನನ್ನ ಮಗನಿಗೆ ನಾನು ಬೀದರ ಆಸ್ಪತ್ರೆಗೆ ಕಳುಹಿಸಿರುತ್ತೇನೆ. ಆದ್ದರಿಂದ ನಾವು ಮತ್ತು ಅವರು ಪೋಲಿಸರಿಗೆ ದೂರನ್ನು ಕೊಟ್ಟಾಗ ದಿನಾಂಕ 05-10-2021ರಂದು ಪೋಲಿಸರು ರಾಜೀ ಸಂಧಾನ ಮಾಡಿರುತ್ತಾರೆ. ರಾಜೀ ಆದರೂ ಸಹ ಅದೇ ದಿನ ಮಾಣಿಕ ರೆಡ್ಡಿರವರು ಪ್ರಾಸಾ-4ರವರಿಗೆ ಮುಂದು ಮಾಡಿ ನನ್ನ ವಿರುದ್ದ ಸುಳ್ಳು ಪ್ರಕರಣ ದಾಖಲಿಸಿರುತ್ತಾರೆ. ನಮ್ಮ ಮನೆ ಮತ್ತು ಪ್ರಾಸಾ-4ರವರ ಮನೆ 400 ಮೀಟರ ದೂರದಲ್ಲಿದೆ. ಪ್ರಾಸಾ-4ರವರು ತಮ್ಮ ಮನೆಯಲ್ಲಿ ಈಗಾಗಲೇ ಶೌಚಾಲಯವನ್ನು ಕಟ್ಟಿಸಿದ್ದು ಅವರು ಅಲ್ಲಿಯೇ ಹೋಗುತ್ತಾರೆ.

ಆ ದಿನ ನಾನು ಮತ್ತು ನನ್ನ ಮಗ ಮನೆಯಲ್ಲಿ ಇರಲಿಲ್ಲ ಮತ್ತು ನನ್ನ ಮಗ ಬೀದರ ಆಸ್ಪತ್ರೆಗೆ ಹೋಗಿದ್ದ. ನಮ್ಮ ಮನೆಯ ಮೇಲ್ಛಾವಣಿ ಮೇಲೆ ಹೋದರು ಸಹ ಕಂಟಿಗಳು ಇದ್ದರು ಸಹ ಏನು ಕಾಣಿಸುವುದಿಲ್ಲ. ನಾನು ಗ್ರಾಮ ಪಂಚಾಯಿತಿಯಿಂದ ಪಡೆದ ಪ್ರಮಾಣ ಪತ್ರವನ್ನು ನ್ಯಾಯಾಲಯಕ್ಕೆ ಹಾಜರು ಪಡಿಸುತ್ತಿದ್ದು ಅದನ್ನು ನಿಡಿ-1 ಎಂದು ಗುರುತಿಸಲಾಯಿತು.

**ಪಾಟೀ ಸವಾಲು ಸಹಾಯಕ ಸರಕಾರಿ ಅಭಿಯೋಜಕರು ಸಮಯ ಕೋರಿದ್ದರಿಂದ ಸಮಯ ನೀಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**ಪ್ರಧಾನ ಪ್ರ.ದ.ನ್ಯಾ.ದಂ. ಚಿಂಚೋಳಿ**